**ಮೆ. ಬೆಳಗಾಂ ಶುಗರ್ಸ್ ಪ್ರೈ ಲಿ, ಸರ್ವೆ.ನಂ. 56/2, 59/1, 59/2, 59/3, ಮತ್ತು ಇನ್ನಿತರೆ, ಹುದಲಿ ಗ್ರಾಮ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ ಇವರು ಈಗಾಗಲೇ ಸ್ಥಾಪಿತಗೊಂಡಿರುವ ತಮ್ಮ ಸಕ್ಕರೆ ಕಾರ್ಖಾನೆಯ ಕಬ್ಬು ನುರಿಸುವ ಸಾಮರ್ಥ್ಯವನ್ನು 3500 ಟಿಸಿಡಿ ಯಿಂದ 7500 ಟಿಸಿಡಿಗೆ ಮತ್ತು ಸಹ ವಿದ್ಯುತ್ ಘಟಕವನ್ನು 14 ಮೆಗಾವ್ಯಾಟ್‌ನಿಂದ 36 ಮೆಗಾವ್ಯಾಟ್‌ಗೆ ವಿಸ್ತರಿಸಲು ಉದ್ದೇಶಿಸಿರುತ್ತಾರೆ. ಸದರೀ ಯೋಜನೆಯ ಕುರಿತಂತೆ ದಿನಾಂಕ: 26–10–2017 ರಂದು ಬೆಳಿಗ್ಗೆ 11.00 ಗಂಟೆಗೆ ಮೆ. ಬೆಳಗಾಂ ಶುಗರ್ಸ್ ಪ್ರೈವೇಟ್ ಲಿಮಿಟೆಡ್, ಸರ್ವೆ.ನಂ. 56/2, 59/1, 59/2, 59/3, ಮತ್ತು ಇನ್ನಿತರೆ ಸರ್ವೆ ನಂ.ಗಳ ಯೋಜನಾ ಸ್ಥಳದಲ್ಲಿ, ಹುದಲಿ ಗ್ರಾಮ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ ರಾಜ್ಯದಲ್ಲಿ ಜರುಗಿದ ಪರಿಸರ ಸಾರ್ವಜನಿಕ ಸಭೆಯ ನಡುವಳಿಗಳು**

**ಸ್ಥಳ:** ಮೆ. ಬೆಳಗಾಂ ಶುಗರ್ಸ್ ಪ್ರೈ ಲಿ, **ಸರ್ವೆ.ನಂ. 56/2, 59/1, 59/2, 59/3, ಮತ್ತು ಇನ್ನಿತರೆ (ಯೋಜನಾ ಸ್ಥಳ)**, ಹುದಲಿ ಗ್ರಾಮ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ ರಾಜ್ಯ.

| | | |
|---|---|---|
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ–1 |
| ಉದ್ದೇಶಿತ ಯೋಜನೆಯ ಪ್ರವರ್ತಗಾರರ ಪರವಾಗಿ ಹಾಜರಿದ್ದ ಅಧಿಕಾರಿಗಳು/ಪ್ರತಿನಿಧಿಗಳ ವಿವರ | : | ಅನುಬಂಧ–2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ–3 |
| ಯೋಜನಾದಾರರು ಮಂಡಿಸಿದ ಪ್ರಸ್ತಾಪಿತ ಯೋಜನೆಯ ಸಾರಾಂಶ | : | ಅನುಬಂಧ–4 |

**ಪೀಠಿಕೆ:**

ಮೆ. ಬೆಳಗಾಂ ಶುಗರ್ಸ್ ಪ್ರೈ ಲಿ, **ಸರ್ವೆ.ನಂ. 56/2, 59/1, 59/2, 59/3, 59/4, 59/5, 59/6, 60/1, 60/2, 60/3, 60/4, 60/5, 65/1, 65/3, 65/6, 68/3, 68/6+5ಬಿ, 68/5ಬಿ, 68/10, 68/7, 68/4ಎ, 68/4ಬಿ, 68/4ಸಿ, 68/4ಡಿ, 69/1, 69/2, 69/3, 69/4, 69/5, 69/7 ಮತ್ತು 69/9**, ಹುದಲಿ ಗ್ರಾಮ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ ಇವರು ಈಗಾಗಲೇ ಸ್ಥಾಪಿತಗೊಂಡು ಕಾರ್ಯನಿರ್ವಹಿಸುತ್ತಿರುವ ಸಕ್ಕರೆ ಕಾರ್ಖಾನೆಯ ಕಬ್ಬು ನುರಿಸುವ ಸಾಮರ್ಥ್ಯವನ್ನು 3500 ಟಿಸಿಡಿ ಯಿಂದ 7500 ಟಿಸಿಡಿಗೆ ಮತ್ತು ಸಹ ವಿದ್ಯುತ್ ಘಟಕವನ್ನು 14 ಮೆಗಾವ್ಯಾಟ್‌ನಿಂದ 36 ಮೆಗಾವ್ಯಾಟ್‌ಗೆ ವಿಸ್ತರಿಸಲು ಪ್ರಸ್ತಾವನೆಯನ್ನು ಹೊಂದಿದ್ದು, ಬೆಳಗಾವಿ ಜಿಲ್ಲಾ ವ್ಯಾಪ್ತಿಯ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ. ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ ಇವರು ದಿನಾಂಕ: 14–09–2006 ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಗೆ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ರಾಜ್ಯ ಸರ್ಕಾರ ಇವರು ಸದರಿ ಯೋಜನೆಗೆ Terms of Reference (TOR) (ಟಿ.ಒ.ಆರ್) ಅಂತಿಮಗೊಳಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಕೋರುವಂತೆ ಯೋಜನಾ ಸಲಹೆಗಾರರಿಗೆ ತಿಳಿಸಿರುತ್ತಾರೆ. ಅದರಂತೆ ಈ ಯೋಜನೆಗೆ ಕರಡು ಪರಿಸರ ಆಘಾತ ಅಂದಾಜೀಕರಣ ವರದಿಯನ್ನು ಮತ್ತು ಇದರ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಅವತರಣಿಕೆಯ ಸಂಕ್ಷಿಪ್ತ ವರದಿಯನ್ನು ಮಂಡಳಿಗೆ ಸಲ್ಲಿಸಿ, ಪರಿಸರ ಆಘಾತ ಅಧ್ಯಯನ ಅಧಿಸೂಚನೆ–2006 ರ ಪ್ರಕಾರ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಸದರಿಯವರು ಕೋರಿಕೊಂಡಿರುತ್ತಾರೆ.

ಈ ಹಿನ್ನಲೆಯಲ್ಲಿ, ಸದರಿ ಯೋಜನೆಯ ಬೆಳಗಾವಿ ಜಿಲ್ಲಾ ವ್ಯಾಪ್ತಿಯ ಯೋಜನೆಯ ಕುರಿತಂತೆ ಪರಿಸರ ಸಾರ್ವಜನಿಕ ಸಭೆಯನ್ನು ಮೆ. ಬೆಳಗಾಂ ಶುಗರ್ಸ್ ಪ್ರೈ ಲಿ, **ಸರ್ವೆ.ನಂ. 56/2, 59/1, 59/2, 59/3, ಮತ್ತು ಇನ್ನಿತರೆ (ಯೋಜನಾ ಸ್ಥಳ)**, ಹುದಲಿ ಗ್ರಾಮ, ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆ ಕರ್ನಾಟಕ ರಾಜ್ಯ ಇಲ್ಲಿ ದಿನಾಂಕ: 26–10–2017 ರಂದು ಬೆಳಿಗ್ಗೆ 11.00 ಗಂಟೆಗೆ ಏರ್ಪಡಿಸಲಾಗಿರುತ್ತದೆ.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪರಿಸರ ಸಾರ್ವಜನಿಕ ಸಭೆಯ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ "ವಿಜಯ ಕರ್ನಾಟಕ" ದಲ್ಲಿ ದಿನಾಂಕ: 25–09–2017 ರಂದು; "ಡೆಕ್ಕನ್ ಹೆರಾಲ್ಡ್" (ಆಂಗ್ಲ ಭಾಷೆ) ಪತ್ರಿಕೆಯಲ್ಲಿ 25–09–2017 ರಂದು ಹಾಗೂ ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ದಿನ ಪತ್ರಿಕೆಯಾದ "ಕನ್ನಡಮ್ಮ" (ಕನ್ನಡ) ಪತ್ರಿಕೆಯಲ್ಲಿ ದಿನಾಂಕ: 26–09–2017 ರಂದು ನೀಡಿ ಯೋಜನಾ ಸ್ಥಳದ ಸುತ್ತಮುತ್ತಲಿನಲ್ಲಿ ವಾಸವಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ಮೌಖಿಕವಾಗಿ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ

ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ) ಇವರಿಗೆ ಈ ಅಧಿಸೂಚನೆ ಪ್ರಕಟಣೆಯಾದ 30 ದಿನಗಳೊಳಗೆ ಸಲ್ಲಿಸುವಂತೆ ತಿಳಿಸಿ ಪತ್ರಿಕಾ ಪ್ರಕಟಣೆ ನೀಡಲಾಗಿತ್ತು. ಅಲ್ಲದೇ, ಸದರಿ ಯೋಜನೆಯ ಪರಿಸರ ಆಘಾತ ಅಂದಾಜೀಕರಣ ವರದಿಯನ್ನು ಹಾಗು ಕಾರ್ಯಕಾರಿ ಸಾರಾಂಶಗಳ ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ ಜಿಲ್ಲಾಧಿಕಾರಿಗಳ ಕಛೇರಿ, ಬೆಳಗಾವಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬೆಳಗಾವಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ, ಮಹಾನಗರ ಪಾಲಿಕೆ, ಬೆಳಗಾವಿ, ಗ್ರಾಮ ಪಂಚಾಯತ್ ಕಾರ್ಯಾಲಯ, ಹುದಲಿ, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಳಗಾವಿ–1, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಬೆಂಗಳೂರು ಹಾಗೂ ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಈ ಕಛೇರಿಗಳಲ್ಲಿ ಇಡಲಾಗಿತ್ತು.

ದಿನಾಂಕ: 26–10–2017 ರಂದು ಬೆಳಗಾವಿ ತಾಲ್ಲೂಕು ಮತ್ತು ಜಿಲ್ಲೆಯಲ್ಲಿನ ಮೆ. ಬೆಳಗಾಂ ಶುಗರ್ಸ್ ಪ್ರೈ ಲಿ, ಸರ್ವೆ. ನಂ. 56/2, 59/1, 59/2, 59/3, 59/4, 59/5, 59/6, 60/1, 60/2, 60/3, 60/4, 60/5, 65/1, 65/3, 65/6, 68/3, 68/6+5ಬಿ, 68/5ಬಿ, 68/10, 68/7, 68/4ಎ, 68/4ಬಿ, 68/4ಸಿ, 68/4ಡಿ, 69/1, 69/2, 69/3, 69/4, 69/5, 69/7 ಮತ್ತು 69/9, ಹುದಲಿ ಗ್ರಾಮದಲ್ಲಿ ಪರಿಸರ ಸಾರ್ವಜನಿಕ ಸಭೆ ಪ್ರಾರಂಭವಾಯಿತು. ಡಾ. ನವೀನ ಡಿ., ಸಹಾಯಕ ಪರಿಸರ ಅಧಿಕಾರಿಗಳು ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಳಗಾವಿ–1 ಇವರು ಮಾನ್ಯ ಜಿಲ್ಲಾಧಿಕಾರಿಗಳ ಪರವಾಗಿ ಹಾಜರಿದ್ದ ಶ್ರೀ ಶಶೀಧರ ಕುರೇರ, ಕ.ಆ.ಸೇ. (ಹಿರಿಯ ಶ್ರೇಣಿ) (ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ), ಶ್ರೀ. ವಿಜಯಕುಮಾರ ಟಿ ಕಡಕಭಾವಿ, ವಿಭಾಗೀಯ ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಧಾರವಾಡ, ಮತ್ತು ಶ್ರೀ. ಗೋಪಾಲಕೃಷ್ಣ ಬಿ ಸಣತಂಗಿ, ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಳಗಾವಿ–1 ಹಾಗೂ ಸದರಿ ಸಭೆಗೆ ಆಗಮಿಸಿದಂತಹ ಎಲ್ಲಾ ಸಾರ್ವಜನಿಕರನ್ನು, ರೈತ ಬಾಂಧವರಿಗೂ, ಮೆ. ಬೆಳಗಾಂ ಶುಗರ್ಸ್ ಪ್ರೈ ಲಿ, ಸಿಬ್ಬಂದಿ ವರ್ಗದವರಿಗೂ, ಮೆ. ಎನ್ವಿರಾನಮೆಂಟಲ್ ಹೆಲ್ತ್ ಆಂಡ್ ಸೇಫ್ಟಿ ಕನ್ಸಲ್ಟೆಂಟ್ಸ್ ಪ್ರೈ. ಲಿ ಇವರ ಸಿಬ್ಬಂದಿ ವರ್ಗದವರಿಗೂ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಹಾಗೂ ಎಲ್ಲಾ ಮಾಧ್ಯಮ ಮಿತ್ರವರ್ಗದವರಿಗೂ ಸ್ವಾಗತಿಸಿದರು. ಸದರೀ ಯೋಜನೆಯು ಪರಿಸರ ಆಘಾತ ಅಧ್ಯಾಯನ ಅಧಿಸೂಚನೆ 2006 ರಡಿಯಲ್ಲಿ ಬರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಬೇಕಾಗಿರುವ ಕುರಿತು ನೆರೆದಿದ್ದ ಸಾರ್ವಜನಿಕರಿಗೆ ವಿವರಿಸಿದರು. ಮಾನ್ಯ ಜಿಲ್ಲಾಧಿಕಾರಿಗಳಿಂದ ನಾಮನಿರ್ದೇಶನಗೊಂಡ ಹೆಚ್ಚುವರಿ ಜಿಲ್ಲಾಧಿಕಾರಿಗಳ ಶ್ರೇಣಿಯ ಅಧಿಕಾರಿಗಳಾದ ಶ್ರೀ ಶಶೀಧರ ಕುರೇರ, ಕ.ಆ.ಸೇ. ಇವರಿಗೆ ಈ ಸಭೆಯ ಅಧ್ಯಕ್ಷತೆ ವಹಿಸಿ ನಡೆಸಿ ಕೊಡಬೇಕೆಂದು ಕೋರಿದರು.

**ಶ್ರೀ ಶಶೀಧರ ಕುರೇರ, ಕ.ಆ.ಸೇ ಮಾನ್ಯ ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ, ಬೆಳಗಾವಿ.**

ಮೆ. ಬೆಳಗಾಂ ಶುಗರ್ಸ ಪ್ರೈವೇಟ್ ಲಿಮಿಟೆಡ್ ವತಿಯಿಂದ ಇವತ್ತು ಶುಗರ ಪ್ಯಾಕ್ಟರಿಯ ಸಾಮರ್ಥ್ಯದ ಜೊತೆಗೆ ವಿದ್ಯುತ್ ಹೆಚ್ಚುವರಿಯಾಗಿ ಉತ್ಪಾದನೆ ಮಾಡಲು ಪ್ರಸ್ಥಾವನೆ ಬಂದಿದೆ, ಈ ಪ್ರಸ್ಥಾವನೆ ಕುರಿತು ಬಹಳಷ್ಟು ಜನ ಈ ಸುತ್ತ ಮುತ್ತಲಿನ ರೈತ ಬಾಂಧವರು, ಪರಿಸರವಾದಿಗಳು, ಪರಿಸರ ಇಲಾಖೆಯ ಅಧಿಕಾರಿಗಳು ಸಹ ಇಲ್ಲಿ ಇದ್ದಾರೆ ಮುಖ್ಯವಾಗಿ ಈ ಒಂದು ಕಾರ್ಖಾನೆಯ ಬಗ್ಗೆ ಮತ್ತು ಈ ಸಾಮರ್ಥ್ಯವನ್ನು ಹೆಚ್ಚಿಸುವ ಬಗ್ಗೆ ತಮ್ಮೆಲ್ಲರ ಮುಂದೆ ಈ ಒಂದು ಬಗೆಯ ಪ್ರಸ್ತುತಿಯನ್ನು ನೀಡಲಾಗುತ್ತದೆ, ಆ ಪ್ರಸ್ತುತಿಯಲ್ಲಿ (Power point presentation) ತಾವೆಲ್ಲಾ ಗಮನಹರಿಸಿ ಆ ವಿಷಯವನ್ನು ತಿಳಿದುಕೊಳ್ಳಬಹುದು. ಈ ಸಭೆಯು ಅಚ್ಚು ಕಟ್ಟಾಗಿ ನಡೆಸಲು ತಾವು ಎಲ್ಲರು ಸಹಕರಿಸಬೇಕಾಗಿ ಕೇಳಿಕೊಳ್ಳುತ್ತಾ ತದನಂತರ ತಮ್ಮ ಸಲಹೆ ಸೂಚನೆಗಳನ್ನು ಸ್ವೀಕರಿಸಲಾಗುತ್ತದೆ ಎಂದು ಸಭೆಯಲ್ಲಿದ್ದ ಸಾರ್ವಜನಿಕರಿಗೆ ತಿಳಿಸಿ ಧನ್ಯವಾದಗಳನ್ನು ತಿಳಿಸಿದರು.

**ಶ್ರೀ ಮಧುಕುಮಾರ ಎಸ್, ಮೆ. ಎನ್ವಿರಾನಮೆಂಟಲ್ ಹೆಲ್ತ್ ಆಂಡ್ ಸೇಫ್ಟಿ ಕನ್ಸಲ್ಟೆಂಟ್ಸ್ ಪ್ರೈ. ಲಿ**

ಈ ಯೋಜನಾ ಪರಿಸರ ಸಭೆಯಲ್ಲಿ ಮೆ. ಬೆಳಗಾಂ ಶುಗರ್ಸ ಪ್ರೈವೇಟ್ ಲಿಮಿಟೆಡ್ ಇವರು ಸ್ಥಾಪಿತಗೊಂಡಿರುವ ಸಕ್ಕರೆ ಕಾರ್ಖಾನೆಯ ಕಬ್ಬು ನುರಿಸುವ ಸಾಮರ್ಥ್ಯವನ್ನು 3500 ಟಿಸಿಡಿ ಯಿಂದ 7500 ಟಿಸಿಡಿಗೆ ಮತ್ತು ಸಹ ವಿದ್ಯುತ್ ಘಟಕವನ್ನು 14 ಮೆಗಾವ್ಯಾಟ್‌ನಿಂದ 36 ಮೆಗಾವ್ಯಾಟ್‌ಗೆ ಈಗಾಗಲೆ ಪ್ರಸ್ತಾಪಿಸಿರುತ್ತಾರೆ. ಈ ಒಂದು ಯೋಜನೆಯು 14 ನೇ ಸೆಪ್ಟೆಂಬರ 2006 ಅಧುಸೂಚನೆಯ ಬಿ ವರ್ಗಕ್ಕೆ ಸೇರ್ಪಟ್ಟಿದ್ದು ಎಂದು ತಿಳಿಸಿದರು. ಸದರಿ ಯೋಜನೆಯ ಬಗ್ಗೆ ಮಾಹಿತಿಯನ್ನು ಶಕ್ತಿ ಬಿಂದು ಪ್ರದರ್ಶನದ (Power point presentation) ಮೂಲಕ ಸಾರ್ವಜನಿಕರಿಗೆ ವಿವರಿಸಿದರು.

**ಶ್ರೀ ಶಶೀಧರ ಕುರೇರ, ಕ.ಆ.ಸೇ ಮಾನ್ಯ ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ, ಬೆಳಗಾವಿ.**

ಈಗಾಗಲೇ ಮೆ. ಎನ್ವಿರಾನಮೆಂಟಲ್ ಹೆಲ್ತ್ ಆಂಡ್ ಸೇಫ್ಟಿ ಕನ್ಸಲ್ಟೆಂಟ್ಸ ಪ್ರೈ. ಲಿ ಬೆಂಗಳೂರು ಇವರು ಪ್ರಸ್ತುತ ಪಡಿಸಿರುವ ಪ್ರಸ್ತುತಿಯನ್ನು ತಾವೆಲ್ಲರೂ ಗಮನಿಸಿದ್ದಿರಿ ಮತ್ತು ಕಾರ್ಖಾನೆಯ ಸುತ್ತಮುತ್ತಲಿನ ಸಾರ್ವಜನಿಕರು ಹಾಗೂ ರೈತ ಬಾಂಧವರು ಸಲಹೆ ಸೂಚನೆಗಳಿವೆ ತಿಳಿಸಲು ಹೇಳಿದರು. ಒಬ್ಬಬ್ಬರಾಗಿ ಬಂದು ತಮ್ಮ ಅಭಿಪ್ರಾಯಗಳನ್ನು ಬಹಳ ಸ್ಪಷ್ಟ ಹಾಗೂ ನೇರವಾಗಿ ಹೇಳಬೇಕು.

ಮತ್ತು ಮೊದಲು ಏನು ಹೇಳಿರುತ್ತೀರಿ ಆ ವಿಷಯವನ್ನು ಪದೇ ಪದೇ ಹೇಳಕೂಡದು ಎಂದು ತಿಳಿಸಿದರು. ಮೆ. ಎನ್ವಿರಾನಮೆಂಟಲ್ ಹೆಲ್ತ್ ಆಂಡ್ ಸೇಫ್ಟಿ ಕನ್ಸಲ್ಟೆಂಟ್ಸ್ ಪ್ರೈ. ಲಿ ಬೆಂಗಳೂರು ರವರು ವ್ಯಕ್ತಪಡಿಸಿದ ಪ್ರಸ್ತುತಿ ಪ್ರಕಾರ ಇದು ಪರಿಸರಕ್ಕೆ ಸಂಬಂಧಪಟ್ಟ ಚರ್ಚೆಯಾಗಿರುತ್ತದೆ ಆದ್ದರಿಂದ ಪರಿಸರಕ್ಕೆ ಸಂಬಂಧಪಟ್ಟ ಸಲಹೆ ಸೂಚನೆಗಳನ್ನು ಮಾತ್ರ ನೀಡಲು ಸಾರ್ವಜನಿಕರಿಗೆ ಸೂಚಿಸಿದರು.

**ಅದರಂತೆ ಈ ಕೆಳಕಂಡ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು:**

1. **ಶ್ರೀ. ಚಂದ್ರು ಕುಂದರಗಿ, ಹುದಲಿ ಗ್ರಾಮ:** ಬೆಳಗಾಂ ಶುಗರ್ಸ್ ಕಾರ್ಖಾನೆ ಸ್ಥಾಪನೆ ಆದಗಿನಿಂದ ಸುತ್ತಮುತ್ತಲಿನ ರೈತರಿಗೆ ಹಾಗೂ ಸಾರ್ವಜನಿಕರಿಗೆ ಮತ್ತು ಯುವಕರಿಗೆ ಅನುಕೂಲವಾಗಿದೆ ಹಾಗೂ ರೈತರು ಬೆಳೆದ ಕಬ್ಬನ್ನು ಕಾರ್ಖಾನೆಗೆ ಸಾಗಿಸಲು ಸಹ ಅನೂಕೂಲಕರವಾಗಿದೆ. ಆದ್ದರಿಂದ, ಕಾರ್ಖಾನೆಗೆ ಅನುಮತಿ ನೀಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ ಎಂದು ತಿಳಿಸಿದರು.

2. **ಶ್ರೀ. ಬಸವರಾಜ ಕೊಂತಿ, ಹುದಲಿ ಗ್ರಾಮ:** ಈ ಕಾರ್ಖಾನೆ ಆಗುವುದರಿಂದ ಟೈರ ಪಂಚರ ಹಾಕುವ ಅಂಗಡಿಕಾರರಿಗೆ, ಹೋಟಲ್ ವ್ಯಾಪರಸ್ಥರಿಗೆ ಸಣ್ಣ ಪುಟ್ಟ ವ್ಯಾಪರಸ್ಥರಿಗೆ ಅನೂಕೂಲವಾಗಲಿದೆ ಎಂದು ತಿಳಿಸಿದರು.

3. **ಶ್ರೀ. ಮಹಾದೇವ ಅಣ್ಣಪ್ಪ ವಕ್ಕುಂದ, ಯದ್ದಲಗುಡ್ಡ ಗ್ರಾಮ:** ಪರಿಸರ ಬಗ್ಗೆ ಹೇಳುವುದಾದರೆ ಈ ಕಾರ್ಖಾನೆ ಸ್ಥಾಪನೆಯಾದಗಿನಿಂದ ಯಾವುದೇ ರೀತಿಯ ಪರಿಸರ ಮಾಲಿನ್ಯ ಆಗಿರುವುದಿಲ್ಲ, ಅಪಾಯಕಾರಿ ಹಾನಿ ಏನು ಆಗಿರುವುದಿಲ್ಲ ಈ ಕಾರ್ಖಾನೆ ಮಾಡುವುದರಿಂದ ಒಳ್ಳೆಯದಾಗುತ್ತದೆ ಎಂದು ತಿಳಿಸಿದರು.

4. **ಶ್ರೀ. ಹುಸೇನಖಾನ ದೇಸಾಯಿ, ಅಂಕಲಗಿ ಗ್ರಾಮ:** ಈ ಸಮಾರಂಭಕ್ಕೆ ಆಗಮಿಸಿದ ಎಲ್ಲರಿಗೂ ನನ್ನ ನಮಸ್ಕಾರಗಳು, ಎಲ್ಲರೂ ಹೇಳ್ತಾಯಿದ್ದಾರೆ ಕಾರ್ಖಾನೆ ಆಗಿರುವುದು ಒಳ್ಳೆಯದು ಈಗ ನಮ್ಮ ಶಾಸಕರು ಎಲ್ಲಾ ಕೋ–ಆಪರೇಟಿವ ಕಾರ್ಖಾನೆಗಳು ಯಾವ ರೀತಿಯಲ್ಲಿ ನಡಿತಿದ್ದಾವೆ ಅಂತಾ ಎಲ್ಲರಿಗೂ ಮಾಹಿತಿ ಇದೆ. ಆದರೆ, ಇದು ಪ್ರೈವೆಟ್ ಫ್ಯಾಕ್ಟರಿ ನಮ್ಮ ಸಾವುಕಾರರು ಕಾಯಕವೇ ಕೈಲಾಸ ಅನ್ನೋ ಬಸವಣ್ಣನವರ ವಚನದ ಥರ ಎಲ್ಲರಿಗೂ ಉಪಯೋಗವಾಗೋ ದೃಷ್ಠಿಯಿಂದ ಮಾಡಿದಾರೆ, ಆದರೆ ಇವರೆಲ್ಲಾ ಟೆಕ್ನಿಕಲ್ಲಿ ಎನ್ವಿರೊನಮೆಂಟ ಆಮೇಲೇ ಅಂಡರ ವಾಟರ ರಸ್ತೆ ಧೂಳಿನ ಬಗ್ಗೆ ಎಲ್ಲಾ ಹೇಳ್ತಾಯಿದ್ದಾರೆ. ಆದರೂ ಸುಮಾರು ಸೈಡ ಎಫೆಕ್ಟ್ಸ ಆಗೋದೇ, ಆದರೆ ಅವರು ಹೇಳ್ತಾರೆ ಇದರ ಬಗ್ಗೆ ಕ್ರಮ ತಗೊಂತಾರೆ, ಅದನ್ನು ಇಂಪ್ಲಿಮೆಂಟ್ ಮಾಡಬೇಕೆನ್ನುವುದು ನನ್ನ ಭಾವನೆ. ಅಂದರೆ ಸ್ವಲ್ಪ ನನಗ ಹುದಲಿ ತುಂಬಾ ಸಂಪರ್ಕ ಇದೆ, ಅದರೆ ನನಗೆ ಹಾರೂ ಬೂದಿ ಬಗ್ಗೆ ಅನುಮಾನ ಇತ್ತು ಆದರೆ ಇಲ್ಲಿಯವರೆಗೂ ನಮಗೇನೂ ತೊಂದರೆ ಆಗಿಲ್ಲಾ ಆದರೆ ಮುಂದೆ ಅದು ಆಗಬಾರದು ಅನ್ನೊತರ ಕ್ರಮ ತಗೊಬೇಕು. ಎರಡನೆಯದು ಉದ್ಯೋಗ ಲಾಭಕ್ಕಾಗೆ ಎಲ್ಲಾರೂ ಮಾಡುವುದು, ಆದರೆ ರೈತರ ಬಗ್ಗೆ ನೀವು ಸ್ವಲ್ಪ ಹೆಚ್ಚಿನ ಕಾಳಜಿ ತಗೊಬೇಕು ಯಾಕಂದ್ರೆ ಅಂತರ ಜಲಕ್ಕೆ ಸ್ವಲ್ಪ ತೊಂದರೆ ಆಗಬಹುದು ನೀರಿನ ಮಟ್ಟ ಕೆಳಗಡೆ ಹೊಗುವ ಚಾನ್ಸಸ್ ಇರುತ್ತವೆ. ಆದರೆ ಈಗಾಗಲೇ ಹೇಳಿದರು 320 ಲಕ್ಷ ಸೋಸಿಯಲ್ ವರ್ಕ ಮಾಡಲು ಫಂಡ ಇದೆ ಅಂತ ಹೇಳಿದಿರಿ ಆದರೆ ಆ ಫಂಡನ್ನು ಸರಿಯಾಗಿ ಸುತ್ತಮುತ್ತಲು ಬರುವ ಹಳ್ಳಿಗಳಿಗೆ ಉಪಯೋಗ ಮತ್ತು ಇಂಪ್ಲಿಮೆಂಟ್ ಮಾಡಬೇಕು, ಆದನ್ನು ಮಾಡತ್ತೀರಿ ಅನ್ನೋ ಬರವಸೆ ನಮ್ಮಲ್ಲೂ ಇದೆ ಮುಂದೆ ತಾವ್ರೂ ಹೆಚ್ಚಿನ ಡೆವೆಲಪಮಂಟ್ ಮಾಡುತ್ತಿರಿ, ಅದರ ಬಗ್ಗೆ ನಮ್ಮ ಸ್ವಾಗತ ಇದೆ. ಏನೂ ತಕರಾರು ಇರುವುದಿಲ್ಲ ಮತ್ತು ಈ ಕಾರ್ಖಾನೆಯಿಂದ ನಮ್ಮ ಕುಂದರನಾಡು ಕ್ಷೇತ್ರಕ್ಕೆ ತುಂಬಾ ಅನೂಕೂಲವಾಗಿದೆ ಯಾಕಂದ್ರೇ ಬೇರೆ ಕಾರ್ಖಾನೆಗಳು ತುಂಬಾ ದೂರದಲ್ಲಿದ್ದವು ತೊಂದರೆ ಆಗುತ್ತಿತ್ತು ಆದರೆ ಈಗ ಅನೂಕೂಲ ಆಗಿದೆ ಮುಂದೇನು ಹೀಗೇ ಬೆಳಿಲಿ ಅಂತಾ ಹೇಳಿ ನನ್ನ ಎರಡು ಮಾತುಗಳನ್ನ ಮುಗಿಸುತ್ತೇನೆ.

5. **ಶ್ರೀ. ಬಸವಣ್ಣೆ ಪಾಟೀಲ್, ಯಲ್ಲಾಪೂರ ಗ್ರಾಮ:** ಈ ಕಾರ್ಖಾನೆ ಬಂದ ಮೇಲೆ ಅನೂಕೂಲ ಆಗಿದೆ ಆದರೆ ರೈತರು ಕಷ್ಟದಲ್ಲಿದ್ದಾರೆ, ಯಾಕೆ ಕಷ್ಟದಲ್ಲಿ ಇದ್ದಾರೆ ಎಂದರೆ ಬೆಲೆ ಕಡಿಮೆ ಆಗ್ತಾ ಇದೆ, ಯಾಕಂದ್ರೆ ಒಂದು ಕೂಲಿ ಮನುಷ್ಯ ರೂ.200 ತೆಗೆದುಕೊಳ್ಳುತ್ತಾನೆ 6 ಗಂಟೆ ಆದರೆ, 12 ಗಂಟೆ ಆಯ್ತು ಅಂದ್ರೆ ಕೆಲಸ ಬಿಟ್ಟು ಬಿಡ್ತಾರೆ. ಸಾವುಕಾರರು ಫ್ಯಾಕ್ಟರಿ ಕಟ್ಟಿದ್ದಾರೆ ಅದು ನಮ್ಮ ಫ್ಯಾಕ್ಟರಿ ಅದನ್ನು ಮುಂದೆ ತರಬೇಕು ಅನ್ನುವುದು ನಮಗೆ ಗೊತ್ತಿದೆ ಆದರೆ ಎಲ್ಲಾ ಫ್ಯಾಕ್ಟರಿಗಿಂತ 1 ರೂಪಾಯಿ ಹೆಚ್ಚು ಕೊಡಿ ಅಂತಾ ನಾವು ಕೇಳಿಕೊಳ್ಳುತ್ತಿದ್ದೇವೆ.

   **ಶ್ರೀ ಶಶೀಧರ ಕುರೇರ, ಕ.ಆ.ಸೇ. ಮಾನ್ಯ ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ, ಬೆಳಗಾವಿ.**
   ಪರಿಸರಕ್ಕೆ ಸಂಬಂಧಪಟ್ಟ ಸಲಹೆಗಳನ್ನು ಮಾತ್ರ ಸಲ್ಲಿಸಲು ಸೂಚಿಸಲಾಯಿತು.

6. **ಶ್ರೀ. ಚೆನ್ನಬಸಪ್ಪ ಮಾಳಗಿ, ಹುದಲಿ ಗ್ರಾಮ:** ಈ ಬೆಳಗಾಂ ಶುಗರ್ಸ ಫ್ಯಾಕ್ಟರಿಯಲ್ಲಿ ಪರಿಸರ ಮಾಲಿನ್ಯದ ಬಗ್ಗೆ ಏನು ಸಭೆ ಕರೆದಿದ್ದೀರಿ ಮತ್ತು ವೇದಿಕೆ ಮೇಲಿರುವ ಅಧಿಕಾರಿ ವರ್ಗದವರೆ ಹಾಗೂ ಕಾರ್ಖಾನೆಯ ಆಡಳಿತ ಮಂಡಳಿಯವರೆ ಇವತ್ತಿನ ದಿನ ಈ ಫ್ಯಾಕ್ಟರಿ ಆಗುವುದರಿಂದ ಶಬ್ಧ ಮಾಲಿನ್ಯ ಆಗಲಿ ಧೂಳು ಆಗಲಿ, ಇರುವುದಿಲ್ಲ. ಇಲ್ಲಿಯ ಪರಿಸರ ಒಂದು ಒಳ್ಳೆ

ವಾತಾವರಣ ಇದೆ. ಇಲ್ಲಿನ ಸುತ್ತಲಿನ ಹಳ್ಳಿಗಳ ರಸ್ತೆಗಳು ಎಲ್ಲಾ ಡಾಂಬರೀಕರಣ ಮಾಡಿದ ರಸ್ತೆಗಳಿವೆ. ಈ ಫ್ಯಾಕ್ಟರಿ ಆಗುವುರಿಂದ ಸುತ್ತಮುತ್ತಲಿನ ಹಳ್ಳಿಯ ಯುವಕರಾಗಲಿ ದುಡಿಯುವವರಿಗೆ ಉದ್ಯೋಗ ಕೊಡುವ ಫ್ಯಾಕ್ಟರಿ ಆಗಿದೆ ಮತ್ತು ಅತೀ ಸುಸಜ್ಜಿತವಾದ ಆಡಳಿತ ಮಂಡಳಿ ಇದೆ ಉತ್ತಮ ರೀತಿಯಲ್ಲಿ ನೆಡೆಸಿಕೊಂಡು ಹೋಗ್ತಾಯಿದ್ದಾರೆ. ಈ ಫ್ಯಾಕ್ಟರಿಯಿಂದ ಯಾವುದೇ ಸಾರ್ವಜನಿಕ ತೊಂದರೆ ಇರುವುದಿಲ್ಲ. ಈ ಬಳ್ಳಾರಿ ಹಳ್ಳದ ಬಗ್ಗೆ ಸ್ವಲ್ಪ ಅಧಿಕಾರಿಗಳಲ್ಲಿ ಒಂದು ವಿನಂತಿ ಇದೆ ಬೆಳಗಾವಿ ನಗರದ ರೊಚ್ಚುನೀರು ಬಳ್ಳಾರಿ ಹಳ್ಳಕ್ಕೆ ಬರುತ್ತಿದೆ ಅದರಿಂದ ಸ್ವಲ್ಪ ನಮಗೆ ತೊಂದರೆ ಆಗುತ್ತಿದೆ. ಆ ಬಳ್ಳಾರಿ ಹಳ್ಳದ ಬಗ್ಗೆ ವಿಚಾರಮಾಡಿ ಅದನ್ನೊಂದನ್ನು ಕ್ರಮ ಕೈಗೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತ ಇಲ್ಲಿಯ ವರೆಗೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ. ವಿಜಯಕುಮಾರ ಟಿ ಕಡಕಭಾವಿ, ವಿಭಾಗೀಯ ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಧಾರವಾಡ:**
ಬೇರೆಯವರು ಯಾರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಿಕ್ಕೆ ಬರ್ತಾಯಿಲ್ಲಾ ಅಂದ್ರೆ ಪರಿಸರ ಮಾಲಿನ್ಯಕ್ಕೆ ಸಂಬಂಧಪಟ್ಟಂತೆ ಎರಡು ವಿಷಯ ಅಂದರೆ ಸಲಹೆಗಳು ಏನು ಬಂದಿವೆ ಆ ಸಲಹೆಗಳಿಗೆ ಕಾರ್ಖಾನೆಯ ಆಡಳಿತ ಮಂಡಳಿಯ ವತಿಯಿಂದ ಹಾಗೂ ಎನ್ವಿರಾನಮೆಂಟಲ್ ಹೆಲ್ತ್ ಆಂಡ್ ಸೇಫ್ಟಿ ಕನ್ಸಲ್ಟೆಂಟ್ಸ್ ಪ್ರೈ. ಲಿ ವತಿಯವರು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ನೀಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಶಶೀಧರ ಕುರೇರ, ಕ.ಆ.ಸೇ. ಮಾನ್ಯ ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ, ಬೆಳಗಾವಿ.**
ಒಂದು ಫ್ಲೈಯ್ ಯ್ಯಾಶ್ (ಹಾರುವ ಬೂದಿ) ಬಗ್ಗೆ ಒಬ್ಬರು ಪ್ರಸ್ತಾಪ ಮಾಡಿದ್ದಾರೆ, ಇನ್ನೊಂದು ಬಳ್ಳಾರಿ ನಾಲಾದಿಂದ ಬರತಕ್ಕಂತ ತ್ಯಾಜ್ಯ ನೀರು ಅದು ಒಂದು, ಶಬ್ಧ ಮಾಲಿನ್ಯದ ಬಗ್ಗೆ ಒಬ್ಬರು ಪ್ರಸ್ತಾಪಮಾಡಿದ್ದಾರೆ, ಅದರ ಬಗ್ಗೆ ತಮ್ಮ ಯೋಜನೆ ಯಾವರೀತಿ ಇದೆ ಏನು ಉತ್ತರ ಕೊಡುತ್ತಿರಿ ತಿಳಿಸಿ ಎಂದು ಹೇಳಿದರು.

**ಶ್ರೀ ಮಧುಕುಮಾರ ಎಸ್, ಮೆ. ಎನ್ವಿರಾನಮೆಂಟಲ್ ಹೆಲ್ತ್ ಆಂಡ್ ಸೇಫ್ಟಿ ಕನ್ಸಲ್ಟೆಂಟ್ಸ್ ಪ್ರೈಲಿ, ಬೆಂಗಳೂರು:**
ಫ್ಲೈಯ್ ಯ್ಯಾಶ್ (ಹಾರು ಬುದಿ) ಬಗ್ಗೆ ಹೇಳುದಾದರೆ, ಎಲೆಕ್ಟ್ರೋ ಸ್ಟ್ಯಾಟಿಕ್ ಪ್ರಿಸಿಪಿಟೇಟರ್ ಅನ್ನೋ ಫಿಲ್ಟರ್ ಘಟಕವನ್ನು ಇಲ್ಲಿ ಅಳವಡಿಸಿ ಧೂಳು ಕಂಟ್ರೋಲ್ ಮಾಡೊದ್ರಿಂದ ಫ್ಲೈಯ್ ಯ್ಯಾಶ್ ಸಮಸ್ಯೆ ಅಗುವ ಸಂಭವ ಅತೀ ಕಡಿಮೆ ಇರುತ್ತದೆ. ತದ ನಂತರ ಕಾಲಾನುಕ್ರಮವಾಗಿ ಆನ್‌ಲೈನ್ ವ್ಯವಸ್ಥೆ ಇರುವುದರಿಂದ ಮಾಲಿನ್ಯ ನಿಯಂತ್ರಣ ಮಂಡಳಿವರ ಮಾನದಂಡಗಳು ಮಾಡಬೇಕಾಗಿರುವುದರಿಂದ ಅದು ಬರುವಂತ ಹೊಗೆ ಧೂಳಿನ ಪ್ರಮಾಣ, ಹಾರೂವ ಬುದಿಯ ಪ್ರಮಾಣ ಜಾಸ್ತಿ ಇದೇಯೊ ಇಲ್ಲವೊ ಅನ್ನೊದಕ್ಕೆ ನೇರವಾಗಿ ಅದು ಮಾಲಿನ್ಯ ನಿಯಂತ್ರಣ ಮಂಡಳಿಯ ಸರ್ವರಗೆ ಹೋಗುವುದರಿಂದ, ಇದು ನಿಖರವಾಗಿ ಹೆಚ್ಚಿನ ಮಟ್ಟದಲ್ಲಿ ಹೊಗುತ್ತಿದೇಯೊ ಕಡಿಮೆ ಮಟ್ಟದಲ್ಲಿ ಹೊಗುತ್ತಿದೆಯೊ ಅಥವಾ ಏನಾದರು ಮಾರ್ಪಾಡು ಮಾಡಬೇಕಾ ಅನ್ನೋದು ಈ ಯೋಜನೆಯಲ್ಲಿ ಇದೆ. ಅದಕ್ಕಾಗಿ ಇಎಸ್‌ಪಿ ಇರೊಂದ್ರಿಂದ ಈ ಹಾರೂ ಬೂದಿ ಸಮಸ್ಯೆ ಇರುದಿಲ್ಲ ಅಂತ ಹೇಳೋಕೆ ಆಗಲ್ಲ, ಕಡಿಮೆ ಇರುತ್ತದೆ ಆದರೂ ಅದು ಮಾನದಂಡಗಳೊಳಗೆ ಇರುತ್ತದೆ. ಇನ್ನೊಂದು ಹೇಳುವುದಾದರೆ ಹಸಿರು ಪಟ್ಟಿ ಕಾರ್ಯಕ್ರಮ ಈಗಾಗಲೇ ಕಾರ್ಖಾನೆಯ ಒಳಗಡೆ ನೆಡಿಸಿದಾರೆ, ಇನ್ನು ಹೆಚ್ಚಿನ ಗಿಡಗಳನ್ನು ಸುಮಾರು 5000 ದಿಂದ 6000 ಗಿಡಗಳನ್ನು ನೆಡುವ ಕಾರ್ಯಕ್ರಮ 10 ಎಕರೆ ಪ್ರದೇಶದಲ್ಲಿ ಮಾಡಲಾಗುತ್ತದೆ. ಅದಕ್ಕೆ ಇಲ್ಲಿ ನಾವು ಸೆಲೆಕ್ಟ ಮಾಡಿರುವ ಮರಗಳ ಜಾತಿ ವಾಯು ಮಾಲಿನ್ಯ ದಲ್ಲಿ ಇರತಕ್ಕಂತ ಕೆಲವು ಅಂಶಗಳನ್ನು ಹಿರಿಕೊಳ್ಳುವಂತಹವು ಅಗಿರುವುದರಿಂದ ಸ್ಥಳೀಯ ಜಾತಿಯ ಮರಗಳನ್ನು ಅರಣ್ಯ ಇಲಾಖೆಯ ಸಲಹೆ ಆಧಾರದ ಮೇಲೆ ಇಲ್ಲಿ ಮಾಡಲಾಗಿದೆ. ಇದು ಈ ಭಾಗದ ವಾಯು ಗುಣ ಮಟ್ಟವನ್ನು ಕಾಪಾಡಲಿಕ್ಕೆ ಅನುಕೂಲವಾಗಲಿದೆ.

**ಶ್ರೀ ಶಶೀಧರ ಕುರೇರ, ಕ.ಆ.ಸೇ. ಮಾನ್ಯ ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ, ಬೆಳಗಾವಿ.**
ಇನ್ನೊಬ್ಬರು ಪ್ರಸ್ತಾಪ ಮಾಡಿದ್ದಾರೆ ಸಿ ಎಸ್ ಆರ್ ಚಟುವಟಿಕೆ ನಲ್ಲಿ ತಾವು ಏನು ಫಂಡ ಮಾಡಿದಿರಿ ಈ ವ್ಯಾಪ್ತಿಯಲ್ಲಿ ಸುತ್ತಮುತ್ತಲು ಅಂದರೆ ಹೊರ ವಲಯದಲ್ಲಿ ಬರತಕ್ಕಂತ ಎಲ್ಲಾ ಗ್ರಾಮಗಳಿಗೆ ಅಲ್ಲಿ ಬೇಕಾದಂತಹ ಹೊರವಲಯದ ಸೌಲಭ್ಯಗಳು ಏನು ಬೇಕಾಗಿದೆ ಅಂತಹದರ ಬಗ್ಗೆ ತಮಗೆ ಮಾಸ್ಟರ ಪ್ಲ್ಯಾನ ಇರಬೇಕು ಅದರ ಬಗ್ಗೆ ತಾವು ಸ್ವಲ್ಪ ನೋಡಿಕೊಳ್ಳಬೇಕಾಗುತ್ತೆ ಎಂದು ತಿಳಿಸಿದರು.

**ಶ್ರೀ.ಶಿವಾನಂದ ಡಂಬಳ, ಮೆ. ಎನ್ವಿರಾನಮೆಂಟಲ್ ಹೆಲ್ತ್ ಆಂಡ್ ಸೇಫ್ಟಿ ಕನ್ಸಲ್ಟೆಂಟ್ಸ್ ಪ್ರೈಲಿ, ಬೆಂಗಳೂರು:**
ಸಿ ಎಸ್ ಆರ್ ಚಟುವಟಿಕೆ ತಾವು ಹೇಳಿದ ಪ್ರಕಾರ ನಾವು ಎಲ್ಲಾ ಗ್ರಾಮಗಳನ್ನ ಗುರುತಿಸಿದ್ದೀವಿ, ಪ್ರತಿ ವರ್ಷ ಅಂದರೆ ಬಾರ್ ಚಾರ್ಟ ಪ್ರಕಾರ ಐದು ವರ್ಷದ್ದು ಪ್ರಾಜೆಕ್ಟ ಹಾಕಿ ಒಂದೊಂದು ವರ್ಷದಲ್ಲಿ ಏನೇನು ಇಂಪ್ರುವಮೆಂಟ್ ಮಾಡಬೇಕು ಯಾವ ಗ್ರಾಮಗಳನ್ನು ತೆಗೆದುಕೊಳ್ಳಬೇಕು ಆ ಗ್ರಾಮದಲ್ಲಿ ಏನೆನಿದೆ ಅದನ್ನು ಅಧ್ಯಯನ ಮಾಡಿ ಅದರ ಪ್ರಕಾರ ಮ್ಯಾನೇಜಮೆಂಟ್‌ನವರು ಇಂಪ್ಲಿಮೆಂಟ್ ಮಾಡುತ್ತಾರೆ. ಆಮೇಲೆ ಇನ್ನೊಂದು ಮುಖ್ಯವಾದದ್ದು ಬಳ್ಳಾರಿ ನಾಲಾ ನೀರಿನಿಂದ ನಮಗೆ ಸಮಸ್ಯೆ ಆಗುತ್ತಿದೆ ಅಂತಾ, ಆದರೆ ನಮ್ಮ

ಕಾರ್ಖಾನೆಯ ವ್ಯಾಪ್ತಿಯಲ್ಲಿ ಬಳ್ಳಾರಿ ನಾಲಾ ಬರುವುದಿಲ್ಲ. ನಮ್ಮದು ರೊಚ್ಚು ನೀರಿನ ಶುದ್ಧಿಕರಣ ಘಟಕ ಹಾಕಿರುವುದರಿಂದ ಮತ್ತು ಶೂನ್ಯದ್ರವ್ಯ ತ್ಯಾಜ್ಯ ವಿಸರ್ಜನೆ ಇರುವುದರಿಂದ ನಮ್ಮದು ಯಾವುದೇ ಕೊಳಚೆ ನೀರು ಹೊರಗಡೆ ಹೋಗುವುದಿಲ್ಲ, ಬಳ್ಳಾರಿ ನಾಲಾ ಬಂದು ಕರ್ನಾಟಕ ನೀರಾವರಿ ನಿಗಮ ಮತ್ತು ಬೆಳಗಾವಿ ಮಹಾನಗರ ಪಾಲಿಕೆ ಆ ಇಲಾಖೆಗಳ ಜವಾಬ್ದಾರಿ ಬರುತ್ತೆ, ಯಾಕಂದ್ರೆ ಕರ್ನಾಟಕ ನೀರಾವರಿ ನಿಗಮ ಹುದಲಿ ಹತ್ರ ಒಂದು ಡ್ಯಾಮ್ ಕಟ್ಟಿದ್ದಾರೆ ಆ ಬೆಳಗಾವಿಯಿಂದ ಬರುವಂತಹ ಕೊಳಚೆ ನೀರನ್ನ ಬೆಳಗಾವಿಯಲ್ಲಿ ಶುದ್ಧಿಕರಣ ಮಾಡಿ ಶುದ್ಧೀಕರಣ ಮಾಡಿದಂತಹ ನೀರನ್ನ ಡ್ಯಾಮಿಗೆ ಬಿಟ್ಟು ಆ ನಂತರ ಆ ಶುದ್ಧೀಕರಣದ ನೀರನ್ನು ವ್ಯವಸಾಯಕ್ಕೆ ಉಪಯೋಗ ಆಗೊತರಾ ಅದನ್ನು ಮಾಡಿದರೆ ಒಳ್ಳೆಯದು, ಮಹಾನಗರ ಪಾಲಿಕೆಯವರು ಕ್ರಮ ತೆಗೆದುಕೊಂಡಿದ್ದಾರೆ ಸದ್ಯದಲ್ಲೆ ಶುದ್ಧೀಕರಣ ಘಟಕವನ್ನು ಮಾಡಿ ಒಳ್ಳೆ ನೀರನ್ನು ವ್ಯವಸಾಯಕ್ಕೆ ನೀಡಬಹುದು ಎಂದು ತಿಳಿಸಿದರು.

**ನಂತರ ಶ್ರೀ ಗೋಪಾಲಕೃಷ್ಣ ಬಿ ಸೂಣತಂಗಿ, ಪರಿಸರ ಅಧಿಕಾರಿಗಳು ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಳಗಾವಿ-1:** ಇವರು ಸಭೆಯ ನಡುವಳಿಗಳನ್ನು ಕ್ರೋಢಿಕರಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ರವರ ಮುಖಾಂತರ, ಪರಿಸರ ಮತ್ತು ಜಿವೀಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರರವರಿಗೆ ರವಾನಿಸುವುದಾಗಿ ಹಾಗೂ ತಮಗೆ ನಡುವಳಿ ಅಥವಾ ಈ ಸಭೆಯ ವಿಡಿಯೋ ಬೇಕಾದಲ್ಲಿ ತಾವು ಮಾಲಿನ್ಯ ನಿಯಂತ್ರಣ ಮಂಡಳಿಯ ಕಛೇರಿಯನ್ನು ಸಂಪರ್ಕಿಸಬಹುದೆಂದು ತಿಳಿಸಿ ಎಲ್ಲರಿಗೂ ವಂದಿಸಿ ಸಭೆಯ ಅಧ್ಯಕ್ಷರ ಸಮ್ಮತಿಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**ಶ್ರೀ ಶಶೀಧರ ಕುರೇರ, ಕ.ಆ.ಸೇ(ಹಿ.ಶ್ರೇ) ಮತ್ತು**
**ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಭೆ, ಬೆಳಗಾವಿ.**